ಸಾಕ್ಷಿಯನ್ನು ಪುನಃ ದಿ.02.03.2026 ರಂದು ಕರೆಯಿಸಿ, ಸತ್ಯಪ್ರತಿಜ್ಞೆಯ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲು ಶ್ರೀ.ಎಸ್.ಪುಟ್ಟರಾಜಣ್ಣ, ವಕೀಲರಿಂದ ಆರೋಪಿತರ ಪರವಾಗಿ :**

5. ಪೋಲೀಸರು ನನ್ನ ಹೇಳಿಕೆಯನ್ನು ಮಾಡಿಕೊಂಡಿದ್ದಾರೆ. ಪೋಲೀಸರ ಮುಂದೆ ಏನು ಹೇಳಿಕೆ ಕೊಟ್ಟಿದ್ದೇನೆಂದು ಈಗ ನೆನಪಿಲ್ಲ. ನಮ್ಮ ಜಮೀನಿನ ಹತ್ತಿರ ನಮ್ಮ ಮನೆ ಇದೆ. ನನ್ನ ಮಗನಿಗೆ ಹಲ್ಲೆ ಮಾಡಿದ್ದನ್ನು ಕಣ್ಣಿನಿಂದ ನೋಡಿದ್ದೇನೆ. ರಾಮಚಂದ್ರಯ್ಯ ದೊಣ್ಣೆಯಿಂದ ಹೊಡೆಯುತ್ತಿದ್ದ, ಮಂಜು ಕಡ್ಡಿಯಿಂದ ಹೊಡೆಯುತ್ತಿದ್ದ, ಮಂಜಣ್ಣ ರಾಡಿನಿಂದ ಹೊಡೆಯುತ್ತಿದ್ದ, ಲಕ್ಷ್ಮಮ್ಮ ಕಸಪೊರಕೆಯಿಂದ ಹೊಡೆದಳು, ಲಕ್ಷ್ಮಮ್ಮ ಖಾರದ ಪುಡಿ ಎರಚಿದಳು. ಇದನ್ನು ಮೊದಲ ಬಾರಿಗೆ ಈ ನ್ಯಾಯಾಲಯದ ಮುಂದೆ ಹೇಳಿದ್ದೇನೆ. ಘಟನೆ 10.30 ಗಂಟೆಗೆ ನಡೆಯಿತು. ಘಟನೆ ಮಧ್ಯಾಹ್ನ 3.30 ಗಂಟೆಗೆ ನಡೆಯಿತು ಎಂದರೆ ನಿಜ. ಘಟನೆಯ ದಿವಸ ನಾನು ಅಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಹೇಳಿಕೆಯನ್ನು ಯಾವಾಗ ದಿನಾಂಕ ತೆಗೆದುಕೊಂಡರು ಎಂದು ನನಗೆ ನೆನಪಿಲ್ಲ. ನಾನು ಯಾವುದೇ ಹೇಳಿಕೆ ಕೊಟ್ಟಿಲ್ಲ, ನನ್ನ ಮಗ ಹೇಳಿಕೊಟ್ಟಂತೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಏನೂ ವಿಚಾರ ಗೊತ್ತಿಲ್ಲದಿದ್ದರೂ ಕೂಡಾ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ

(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು